# ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

## ನಂಜನಗೂಡು

**ಸಿ.ಸಿ ನಂ. 733–2019** **ಪಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಹೆಚ್.ಎಂ.ನಟರಾಜು<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 31–12–2021. |

**ಪಾಟೀ ಸವಾಲುಃ  ಶ್ರೀ ಕೆ.ಟಿ.ಆರ್  ವಕೀಲರಿಂದಃ**

ನಾನು ಕಟ್ಟಿ ಮಾರಾಟ ಮಾಡುವ  ವ್ಯವಹಾರ ಮಾಡುತ್ತಿದ್ದೆ, ಈಗ 5 ವರ್ಷಗಳಿಂದ ನಾನು ಆ ವ್ಯವಹಾರವನ್ನು ಮಾಡುತ್ತಿಲ್ಲ. ನಾನು ನಂಜನಗೂಡಿನ ಹೆಚ್.ಡಿ.ಎಫ್.ಸಿ ಬ್ಯಾಂಕ್ ನಲ್ಲಿ ಕರಂಟ್ ಅಕೌಂಟ್ ಹಾಗೂ  ಕೆನರಾ ಬ್ಯಾಂಕ್ ಮತ್ತು ಕಾರ್ಪೋರೇಶನ್ ಬ್ಯಾಂಕುಗಳಲ್ಲಿ ನನ್ನ ಉಳಿತಾಯ ಖಾತೆಗಳನ್ನು ಹೊಂದಿದ್ದೇನೆ. ಸದರಿ ನನ್ನ ಬ್ಯಾಂಕ್ ಖಾತೆಗಳ ಪಾಸ್ ಪುಸ್ತಕವನ್ನು ಹಾಗೂ ಬ್ಯಾಂಕ್ ಸ್ಟೇಟ್‌ಮೆಂಟ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ.

2. ಆರೋಪಿ 2009 ರಲ್ಲಿ ರೆಪ್ಕೋ ಹೋಮ್ ಫೈನಾನ್ಸ್ ಲಿಮಿಟೆಡ್ ಸಾಲ ಪಡೆದಿದ್ದು ಸದರಿ ಸಾಲಕ್ಕೆ ನಾನು  ಈಗಲೂ ಗ್ಯಾರಂಟರ್ ಆಗಿ ಇದ್ದೇನೆ ಎಂದರೆ ಸರಿ. ಆಗ ನಾನು ಆರೋಪಿಯ ಆ ಸಾಲವನ್ನು ಪಾವತಿ ಮಾಡದೇ ಇದ್ದಲ್ಲಿ ನನಗೆ ತೊಂದರೆ ಆಗುತ್ತದೆ ಎಂದು ತಿಳಿದು ಆರೋಪಿಯ ಇಂಡಿಯನ್ ಬ್ಯಾಂಕ್‌ನ 12 ಸಹಿ ಮಾಡಿದ್ದ ಖಾಲಿ ಚೆಕ್ಕುಗಳನ್ನು ಆರೋಪಿಯಿಂದ ಭದ್ರತೆಗೆಂದು ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ನಂತರ 2013 ರಲ್ಲಿ ಸದರಿ ಇಂಡಿಯನ್ ಬ್ಯಾಂಕ್ ನ 12 ಚೆಕ್ಕುಗಳು ಹಳೆಯದ್ದು ಆಯಿತು ಎಂದು ಹೇಳಿ ನಾನು ಆರೋಪಿಯಿಂದ ಆತನ ಐ.ಸಿ.ಐ.ಸಿ.ಐ ಬ್ಯಾಂಕ್‌ನ 10 ಸಹಿ ಮಾಡಿದ ಖಾಲಿ ಚಕ್ಕುಗಳನ್ನು ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ.

3. ನನ್ನ 2018–19, 2019–20ರ ಆದಾಯ ತೆರಿಗೆ ಘೋಷಣೆಯಲ್ಲಿ ಆರೋಪಿಗೆ ರೂ.25,00,000/– ಸಾಲ ನೀಡಿದ ಬಗ್ಗೆ ತಿಳಿಸಿಲ್ಲ. ಆ ರೀತಿ ಘೋಷಣೆ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

4. ನಾನು ನಂಜನಗೂಡಿನ ಹೆಚ್.ಡಿ.ಎಫ್.ಸಿ ಬ್ಯಾಂಕ್ ನಲ್ಲಿ ದಿ.05-11-2018 ರಂದು ರೂ.48,00,000/- ಕ್ಕೆ ಅಗ್ರಿಕಲ್ಚರ್ ಲೋನ್ ಮಾಡಿ ಆ ಹಣದಿಂದ ಆರೋಪಿಗೆ ರೂ.25,00,000/- ಗಳನ್ನು ಸಾಲವಾಗಿ ನೀಡಿದ್ದೇನೆ. ಈ ಮೇಲೆ ಹೇಳಿದ ವಿಚಾರವನ್ನು ನಾನು ನನ್ನ ಪಿರ್ಯಾದು, ನೋಟಿಸು ಹಾಗೂ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ. ಆ ರೀತಿ ನಾನು ಆ ವಿಷಯವನ್ನು ಬರೆಸಿಲ್ಲ ಎಂದರೆ ಸರಿಯಲ್ಲ. ಈ ಸಂಬಂಧ ನನ್ನ ಬಳಿ ದಾಖಲೆ ಕೂಡ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಸದರಿ ಮಂಜೂರಾದ ರೂ.48,00,000/- ಲೋನ್‌ನಲ್ಲಿ ರೂ.28,00,000/-ಗಳನ್ನು ನಾನು ವಿಥ್‌ಡ್ರಾ ಮಾಡಿ ತಂದಿದ್ದು ಆ ರೂ.28,00,000/- ದಲ್ಲಿ ನಾನು ಆರೋಪಿಗೆ ರೂ.25,00,000/- ಸಾಲವಾಗಿ ನೀಡಿರುತ್ತೇನೆ.

ಮುಂದುವರಿದ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**